ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ
BENGALURU CENTRAL UNIVERSITY
Central College Campus, Dr. B.R. AmbedkarVeedhi, Bengaluru – 560 001.
Ph. No.: 080 – 22131385, E-Mail:registrarbcu@gmail.com / bcuccb@gmail.com

ಸಂಖ್ಯೆ: ಬಿಸಿಯು/ಎಸ್‌ವೈಎನ್–5/56/2019–20 ದಿನಾಂಕ02.01.2020.

ಗೆ,

ಸಿಂಡಿಕೇಟ್ ಸದಸ್ಯರು,
ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ,
ಬೆಂಗಳೂರು

ಮಾನ್ಯರೆ

**ವಿಷಯ: ದಿನಾಂಕ: 23.12.2019 ರಂದು ಜರುಗಿದ 5 ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳು.**

***

ದಿನಾಂಕ: 23.12.2019 ರಂದು ಪೂರ್ವಾಹ್ನ 11–30 ಗಂಟೆಗೆ ಜರುಗಿದ 5 ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳನ್ನು ಮಾನ್ಯ ಕುಲಪತಿಗಳು ಅನುಮೋದಿಸಿದಂತೆ, ಬೆಂಗಳೂರು ವಿಶ್ವವಿದ್ಯಾಲಯದ ಪರಿನಿಯಮಾವಳಿ 5.16 ರನ್ವಯ ಕಳುಹಿಸುತ್ತಿದ್ದೇನೆ.

ನಡಾವಳಿಗಳನ್ನು ರವಾನಿಸಿದ ದಿನಾಂಕದಿಂದ ಏಳು ದಿನಗಳೊಳಗಾಗಿ ಸಭೆಯಲ್ಲಿ ಹಾಜರಿದ್ದ ಸದಸ್ಯರು, ನಡಾವಳಿಗಳ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ಕಳುಹಿಸದಿದ್ದಲ್ಲಿ, ಮೇಲೆ ಹೇಳಿದ ಪರಿನಿಯಮಾವಳಿಗಳ ಅನುಸಾರ ಅವುಗಳನ್ನು ಸ್ಥಿರೀಕರಿಸಲಾಗಿದೆ ಎಂದು ಪರಿಗಣಿಸಲಾಗುವುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಕುಲಸಚಿವರು 02/01/2020

ಅಡಕ: ಮೇಲಿನಂತೆ

ಪ್ರತಿಗಳು:

1. ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – 560 001.
2. ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ), ಕರ್ನಾಟಕ ಸರ್ಕಾರ, ಬೆಂಗಳೂರು–1.
3. ಕುಲಪತಿಗಳು, ಕುಲಸಚಿವರು, ಕುಲಸಚಿವರು (ಮೌಲ್ಯಮಾಪನ), ವಿತ್ತಾಧಿಕಾರಿಗಳ ಆಪ್ತ ಕಾರ್ಯದರ್ಶಿಗಳಿಗೆ. ಬಿಸಿಯು.
4. ಕಛೇರಿ ಪ್ರತಿ / ರಕ್ಷಣಾ ಕಡತ

ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ
BENGALURU CENTRAL UNIVERSITY
Central College Campus, Dr. B.R. Ambedkar Veedhi, Bengaluru – 560 001.
Ph. No.: 080 – 22131385, E-Mail:registrarbcu@gmail.com / bcuccb@gmail.com

**ಸಂಖ್ಯೆ: ಬಿಸಿಯು/ಎಸ್‌ವೈಎನ್–5/ /2019–20** **ದಿನಾಂಕ: 02.01.2020.**

ದಿನಾಂಕ 23.12.2019 ರಂದು ಪೂರ್ವಾಹ್ನ 11.30 ಗಂಟೆಗೆ ಬೋರ್ಡ್‌ರೂಮ್, ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು 560 001 ಇಲ್ಲಿ ಜರುಗಿದ ಸಿಂಡಿಕೇಟ್ 5 ನೇ ಸಾಮಾನ್ಯ ಸಭೆಯ ನಡಾವಳಿಗಳು.

**ಹಾಜರಾದ ಸದಸ್ಯರು:**

| | | |
|---|---|---|
| 1. | ಪ್ರೊ. ಎಸ್. ಜಾಫೆಟ್ | ಸಭಾಧ್ಯಕ್ಷರು |
| 2. | ಡಾ: ಎಂ. ಪಾಂಡುರಂಗಪ್ಪ | ಸದಸ್ಯರು |
| 3. | ಡಾ: ಅರವಿಂದ್ ಹೆಚ್.ಟಿ | ಸದಸ್ಯರು |
| 4. | ಶ್ರೀ. ಹೆಚ್.ಆರ್. ಸತೀಶ್ | ಸದಸ್ಯರು |
| 5. | ಡಾ. ಬಿ.ಎ. ಅನುರಾಧಾ | ಸದಸ್ಯರು |
| 6. | ಡಾ. ಆರ್. ಪಾರ್ವತಿ | ಸದಸ್ಯರು |
| 7. | ಶ್ರೀ ಡಿ.ಜಿ. ಶ್ರೀನಿವಾಸಮೂರ್ತಿ | ಸದಸ್ಯರು |
| 8. | ಶ್ರೀ ಹೆಚ್.ಎನ್. ಹರಿಪ್ರಸಾದ | ಸದಸ್ಯರು |
| 9. | ಶ್ರೀಮತಿ ಜ್ಯೋತಿ ವಿಜಯ್ | ಸದಸ್ಯರು |
| 10. | ಶ್ರೀ ಟಿ.ಹೆಚ್. ಶ್ರೀನಿವಾಸಯ್ಯ | ಸದಸ್ಯರು |
| 11. | ಶ್ರೀ ಆರ್.ಕೆ. ಚಂದ್ರನಾಥ್ | ಸದಸ್ಯರು |
| 12. | ಶ್ರೀ ಥಾಮಸ್ ನೀಲಿಯಾರ | ಸದಸ್ಯರು |
| 13. | ಡಾ. ವಿ.ಆರ್. ದೇವರಾಜು | ಸದಸ್ಯರು |
| 14. | ಪ್ರೊ. ಎನ್. ಚಂದ್ರಪ್ಪ<br>ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 15. | ಪ್ರೊ: ವಿ. ಶಿವರಾಂ<br>ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |

ಕುಲಸಚಿವರು ಸಭೆಗೆ ಆಗಮಿಸಿದ ಎಲ್ಲಾ ಸದಸ್ಯರಿಗೆ ಸ್ವಾಗತ ಕೋರುತ್ತಾ, ಈ ಸಭೆಗೆ ಸರ್ಕಾರದಿಂದ ನಾಮನಿರ್ದೇಶಿತರಾದ ಸದಸ್ಯರು, ಡೀನರು, ಪ್ರಾಧ್ಯಾಪಕರು ಹಾಗೂ ನಾಲ್ಕು ಜನ ಪ್ರಾಂಶುಪಾಲರು ತಮ್ಮ ಪ್ರಥಮ ಸಿಂಡಿಕೇಟ್ ಸಭೆಗೆ ಭಾಗವಹಿಸುತ್ತಿರುವುದರಿಂದ ಪೂರ್ಣ ಪ್ರಮಾಣದ ಸಿಂಡಿಕೇಟ್ ರಚನೆಯಾಗಿದ್ದು, ಸದಸ್ಯರಿಂದ ವಿಶ್ವವಿದ್ಯಾಲಯದ ಅಭಿವೃದ್ಧಿಗೆ ಸಹಕಾರ ಕೋರಿದರು.

ಕುಲಪತಿಗಳು ಸದಸ್ಯರಿಗೆ ಹೂ ಗುಚ್ಛ ನೀಡಿ ಆತ್ಮೀಯವಾಗಿ ಸ್ವಾಗತಿಸಿ ಸದಸ್ಯರಿಗೆ ತಮ್ಮ ಪರಿಚಯಮಾಡಿ ಕೊಡಲು ವಿನಂತಿಸಿದರು. ಅದರಂತೆ ಎಲ್ಲಾ ಸದಸ್ಯರು ತಮ್ಮ ತಮ್ಮ ಪರಿಚಯ ಮಾಡಿಕೊಂಡರು.

ಕುಲಪತಿಗಳು ತಾವು ಈ ವಿಶ್ವವಿದ್ಯಾಲಯದ ಸ್ಥಾಪನೆಗಾಗಿ ವಿಶೇಷಾಧಿಕಾರಿಯಾಗಿ ನೇಮಕಗೊಂಡು ನಂತರ ಕುಲಪತಿಯ ಅಧಿಕಾರ ವಹಿಸಿಕೊಂಡನಂತರ ಕೈಕೊಂಡ ವಿವಿಧ ಚಟುವಟಿಕೆಗಳ ಕುರಿತು ಸಭೆಗೆ ವಿವರಿಸಿದರು.

ಸೆಂಟ್ರಲ್ ಕಾಲೇಜು ಆವರಣದಲ್ಲಿ ಈ ವಿಶ್ವವಿದ್ಯಾಲಯ ಸ್ಥಾಪನೆಯಾಗಿರುವುದರಿಂದ, ಈ ಸ್ಥಳದ ಪರಂಪರೆ, ಇಲ್ಲಿ ಸೇವೆ ಸಲ್ಲಿಸಿದ, ಸಂಶೋಧನೆ ಮಾಡಿದ ಮಹಾನ್ ವ್ಯಕ್ತಿಗಳ ಹಾಗೂ ಇಲ್ಲಿ ಅಭ್ಯಾಸ ಮಾಡಿ ಖ್ಯಾತನಾಮರಾಗಿರುವವರನ್ನು ನೆನಪಿಸಿಕೊಂಡು ಈ ಪರಂಪರೆಯನ್ನು ಮುಂದುವರೆಸಿಕೊಂಡು ಹೋಗುವ ಜವಾಬ್ದಾರಿ ನಮ್ಮ ಮೇಲಿದೆ ಎಂದು ತಿಳಿಸಿದರು. ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ ನಗರ ಕೇಂದ್ರಿತ ವಿಶ್ವವಿದ್ಯಾಲಯವಾಗಿದ್ದು ಇದು ಜಾಗತಿಕ ಮಟ್ಟದಲ್ಲಿ ಗುರುತಿಸುವಂತಾಗುವ ಎಲ್ಲಾ ಅವಕಾಶಗಳು ಇವೆ ಎಂದು ತಿಳಿಸಿ, ನಾವು ಈ ದಿಶೆಯಲ್ಲಿ ಸತತ ಪ್ರಯತ್ನ ಮಾಡಬೇಕಾಗಿದೆ ಎಂದು ಹೇಳಿದರು.

ಕರ್ನಾಟಕ ಸರ್ಕಾರ ಅಸ್ತಿತ್ವದಲ್ಲಿರುವ ಹಾಗೂ ಹೊಸದಾಗಿ ಪ್ರಾರಂಭಿಸಬೇಕಾಗಿರುವ ಸ್ನಾತಕೋತ್ತರ ವಿಭಾಗಗಳಿಗೆ ಬೋಧಕ ಹುದ್ದೆಗಳನ್ನು ಮಂಜೂರಿಸಿ ಹಲವು ಹುದ್ದೆಗಳ ನೇಮಕಾತಿಗಾಗಿ ಅನುಮತಿ ನೀಡಿದೆ ಎಂದು ತಿಳಿಸಿದರು.

ಈ ವಿಶ್ವವಿದ್ಯಾಲಯವನ್ನು ಮಾದರಿ ವಿಶ್ವವಿದ್ಯಾಲಯವಾಗಿ ನಿರ್ಮಾಣ ಮಾಡಲು ಸದಸ್ಯರ ಸಹಕಾರ ಕೋರಿದರು.

ಸದಸ್ಯರಾದ ಶ್ರೀಮತಿ ಜ್ಯೋತಿ ವಿಜಯ್ ಅವರು ಕುಲಪತಿಗಳಿಗೆ ಈ ವಿಶ್ವವಿದ್ಯಾಲಯದ ಬಗ್ಗೆ ಇರುವ ಕಳಕಳಿ, ಅಭಿಮಾನ ಹಾಗೂ ಬದ್ದತೆ ಕುರಿತು ಮೆಚ್ಚುಗೆ ಸೂಚಿಸಿ, ಅಭಿವೃದ್ಧಿ ಕೆಲಸಗಳು ನಿರೀಕ್ಷಿತ ಪ್ರಮಾಣದಲ್ಲಿ ಜರುಗುತ್ತಿಲ್ಲವೆಂದು ತಿಳಿಸಿದರು. ಈ ಕುರಿತು ಗಮನ ಹರಿಸಲು ವಿನಂತಿಸಿದರು.

ಕಾರ್ಯಸೂಚಿ ಕೈಗೆತ್ತಿಕೊಳ್ಳುವ ಪೂರ್ವದಲ್ಲಿ ಸದಸ್ಯರಾದ ಶ್ರೀ ಹೆಚ್.ಆರ್. ಸತೀಶ್ ರವರು, ಪರಿನಿಯಮಗಳ ಪ್ರಕಾರ ಪ್ರತಿ ತಿಂಗಳು ಒಂದು ಸಿಂಡಿಕೇಟ್ ಸಭೆ ಜರುಗಬೇಕು, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮದ ಪ್ರಕಾರ ವರ್ಷದಲ್ಲಿ ಕನಿಷ್ಠ 8 ಸಭೆಗಳನ್ನು ಜರುಗಿಸ ಬೇಕು ಹಾಗೂ 2 ಸಭೆಗಳ ಮಧ್ಯ 8 ವಾರಗಳ ಅಂತರ ಇರಕೂಡದೆಂದು ಇದೆ. ಕಾರಣ ಈ ಕುರಿತು ಒಂದು ತೀರ್ಮಾನ ಕೈಕೊಳ್ಳಬೇಕೆಂದು ತಿಳಿಸಿದರು.

ಕುಲಪತಿಗಳು ಸದಸ್ಯರ ಪ್ರಸ್ತಾವನೆಗೆ ಸ್ಪಂದಿಸಿ ಜನವರಿ 2020 ರಿಂದ ಪ್ರತಿ ತಿಂಗಳು 3ನೇ ವಾರದಲ್ಲಿ ಒಂದು ದಿವಸ ಸಿಂಡಿಕೇಟ್ ಸಭೆ ಜರುಗಿಸಲಾಗುವುದೆಂದು ತಿಳಿಸಿದರು. ನಂತರ ಕಾರ್ಯಸೂಚಿಯನ್ನು ಚರ್ಚೆಗೆ ಕೈಗೆತ್ತಿಕೊಳ್ಳಲಾಯಿತು

| | |
|---|---|
| ವಿಷಯ ಸಂಖ್ಯೆ– 1: | ದಿನಾಂಕ 19.10.2019 ರಂದು ಜರುಗಿದ ಸಿಂಡಿಕೇಟ್ 4ನೇ ಸಾಮಾನ್ಯ ಸಭೆಯ ನಡಾವಳಿಗಳನ್ನು ಧೃಢೀಕರಿಸುವ ಕುರಿತು.<br>ಸಿಂಡಿಕೇಟ್ ನಿರ್ಣಯ:<br>**ದಿನಾಂಕ 19.10.2019 ರಂದು ಜರುಗಿದ ಸಿಂಡಿಕೇಟ್ 4ನೇ ಸಾಮಾನ್ಯ ಸಭೆಯ ನಡಾವಳಿಗಳನ್ನು ಧೃಢೀಕರಿಸಲಾಯಿತು.** |
| ವಿಷಯ ಸಂಖ್ಯೆ–2: | ದಿನಾಂಕ 19.10.2019 ರಂದು ಜರುಗಿದ ಸಿಂಡಿಕೇಟ್ 4ನೇ ಸಾಮಾನ್ಯ ಸಭೆಯ ನಡಾವಳಿಗಳ ಮೇಲೆ ಕೈಕೊಂಡ ಕ್ರಮದ ವರದಿ<br>ಸಿಂಡಿಕೇಟ್ ನಿರ್ಣಯ:<br>**ಕೆಳಗೆ ನಮೂದಿಸಿದ ಸೂಚನೆ / ತೀರ್ಮಾನಗಳೊಂದಿಗೆ ದಿನಾಂಕ 19.10.2019 ರಂದು ಜರುಗಿದ ಸಿಂಡಿಕೇಟ್ ಸಭೆಯ ನಡಾವಳಿಗಳ ಮೇಲೆ ಕೈಕೊಂಡ ಕ್ರಮದ ವರದಿಗೆ ಅನುಮೋದನೆ ನೀಡಲಾಯಿತು.**<br>**ವಿಷಯ ಸಂಖ್ಯೆ 2(ಈ): ಕ್ಯಾಂಟೀನ್ ಕಟ್ಟಡಕ್ಕಾಗಿ ರಾಜ್ಯಸಭಾ ಸದಸ್ಯರಿಂದ ಅನುದಾನ ಪಡೆಯುವ ಕುರಿತು ಕುಲಪತಿಗಳು ಸದಸ್ಯರಾದ ಶ್ರೀ ಹೆಚ್.ಆರ್. ಸತೀಶ್ ರವರೊಂದಿಗೆ ಚರ್ಚಿಸಿ ಒಂದು ಪತ್ರ ಸಿದ್ದಪಡಿಸುವುದಾಗಿ ತಿಳಿಸಿದರು.** |

ವಿಷಯ ಸಂಖ್ಯೆ 4: ವಾಣಿಜ್ಯ ನಿಕಾಯದ Ph.D ಪ್ರವೇಶಗಳನ್ನು ಮುಂದೂಡಿರುವ ಕುರಿತು ಸದಸ್ಯರು ವಿವರಗಳನ್ನು ಬಯಸಿದರು.

ಕುಲಪತಿಗಳು ವಿಶ್ವವಿದ್ಯಾಲಯದ ವಾಣಿಜ್ಯ ಮತ್ತು ನಿರ್ವಹಣೆ ಕೋರ್ಸುಗಳಿಗೆ Ph.D ಪ್ರವೇಶಕ್ಕಾಗಿ ಅರ್ಹರಾದ ಅಭ್ಯರ್ಥಿಗಳ ಸಂಖ್ಯೆ ಗಣನೀಯವಾಗಿ ಹೆಚ್ಚಿಗೆ ಇದ್ದು, ಮಾನ್ಯತೆ ಪಡೆದ ಮಾರ್ಗದರ್ಶಕರ ಹಾಗೂ ಖಾಲಿ ಇರುವ ಸ್ಥಾನಗಳ ಸಂಖ್ಯೆ ಕಡಿಮೆ ಇರುವುದರಿಂದ, ಮೌಖಿಕ ಪರೀಕ್ಷೆ ಸಂದರ್ಭದಲ್ಲಿ ವಿದ್ಯಾರ್ಥಿಗಳು ಹಾಗೂ ಕೆಲವು ಶಿಕ್ಷಕರು ಮಾನ್ಯತೆ ಪಡೆದ ಸಂಶೋಧನಾ ಕೇಂದ್ರಗಳಲ್ಲಿ ಅರ್ಹರಾದ ಶಿಕ್ಷಕರನ್ನು ಮಾರ್ಗದರ್ಶಕರಾಗಿ ಗುರುತಿಸಿ ಅವರಿಗೆ ಲಭ್ಯವಾಗುವ ಸ್ಥಾನಗಳನ್ನು ಪರಿಗಣಿಸಿ ಮೌಖಿಕ ಪರೀಕ್ಷೆ ನಡೆಸಬೇಕೆಂದು ಒತ್ತಾಯಿಸಿರುವ ಹಿನ್ನೆಲೆಯಲ್ಲಿ, ಅಂದು ಅವರ ಮನವಿಯನ್ನು ಪುರಸ್ಕರಿಸಿ, ಮೌಖಿಕ ಪರೀಕ್ಷೆ ಮುಂದೂಡಲಾಗಿದೆ ಎಂದು ತಿಳಿಸಿದರು.

ಸದಸ್ಯರಾದ ಡಾ: ಹೆಚ್.ಟಿ.ಅರವಿಂದ ಹಾಗೂ ಡಾ: ವಿ.ಆರ್. ದೇವರಾಜ್‌ರವರು ಹೊಸ ಮಾರ್ಗದರ್ಶಕರಿಗೆ ಮಾನ್ಯತೆ ನೀಡಿದರೂ ಎಲ್ಲಾ ವಿದ್ಯಾರ್ಥಿಗಳಿಗೆ ಅವಕಾಶ ನೀಡಲು ಆಗುವುದಿಲ್ಲ ಎಂದು ತಿಳಿಸಿದರು. ಸದಸ್ಯರಾದ ಶ್ರೀ ಟಿ. ಹೆಚ್. ಶೀನಿವಾಸಯ್ಯ, ಶ್ರೀಮತಿ ಜ್ಯೋತಿ ವಿಜಯ್, ಡಾ: ಅನುರಾಧಾ ಹಾಗೂ ಡಾ: ಪಾರ್ವತಿ ಯವರು ಚರ್ಚೆಯಲ್ಲಿ ಪಾಲ್ಗೊಂಡು ನಿಯಮಗಳ ಪ್ರಕಾರ ಅರ್ಹತೆ ಹೊಂದಿದ ಅಭ್ಯರ್ಥಿಗಳ ಪಟ್ಟಿಯನ್ನು ಎಷ್ಟು ಅವಧಿಯವರೆಗೆ ಜಾರಿಯಲ್ಲಿ ಇಡಬಹುದು ಎಂಬುದರ ಬಗ್ಗೆ ಮಾಹಿತಿ ಕೋರಿದರು ಹಾಗೂ ಬೆಂಗಳೂರು ಮತ್ತು ಮೈಸೂರು ವಿಶ್ವವಿದ್ಯಾಲಯಗಳಲ್ಲಿ ಈ ಕುರಿತು ಇರುವ ಅವಕಾಶಗಳ/ನಿಬಂಧನೆಗಳ (provisions) ಕುರಿತು ವಿವರಿಸಿದರು. ಡಾ. ಪಾಂಡುರಂಗಪ್ಪನವರು ಅಧಿಸೂಚನೆ ಪ್ರಕಾರ ಅರ್ಹತಾ ಪಟ್ಟಿ ಮುಂದಿನ ಅಧಿಸೂಚನೆವರೆಗೆ ಸಿಂಧುತ್ವ ಹೊಂದಿರುತ್ತದೆ ಎಂದು ತಿಳಿಸಿದರು.

**ಸಿಂಡಿಕೇಟ್ ತೀರ್ಮಾನ:**

**ಅಂತಿಮವಾಗಿ ಸಧ್ಯ ಲಭ್ಯವಿರುವ ಮಾರ್ಗದರ್ಶಕರು ಮತ್ತು ಅವರ ಅಡಿಯಲ್ಲಿ ಖಾಲಿಯಿರುವ ಸ್ಥಾನಗಳಿಗೆ ಮಾತ್ರ ಮೌಖಿಕ ಪರೀಕ್ಷೆ ನಡೆಸ ಬೇಕೆಂದು ತೀರ್ಮಾನಿಸಲಾಯಿತು.**

**ವಿಷಯ ಸಂಖ್ಯೆ 13: ಮುಂಬಡ್ತಿ ನೀಡುವ ಕುರಿತು ಸರ್ಕಾರದಿಂದ ಸ್ಪಷ್ಟೀಕರಣ / ಮಾಹಿತಿ ಪಡೆಯಲಾಗುವುದು ಎಂದು ಕುಲಪತಿಗಳು ಸಭೆಗೆ ತಿಳಿಸಿದರು. ಸರ್ಕಾರದಿಂದ ಸ್ಪಷ್ಟೀಕರಣ ಬಂದನಂತರ ಅದರ ಪ್ರಕಾರ ಅರ್ಹತಾ ದಿನಾಂಕದಿಂದ (retrospective) ಬಡ್ತಿ ನೀಡಲು ಕ್ರಮ ಕೈಕೊಳ್ಳಲಾಗುವುದು ಎಂದು ತಿಳಿಸಿದರು.**

ವಿಷಯ ಸಂಖ್ಯೆ 17: ವಿಶ್ವವಿದ್ಯಾಲಯದಲ್ಲಿರುವ ಕಟ್ಟಡಗಳೆಲ್ಲವೂ ಐತಿಹಾಸಿಕ ಕಟ್ಟಡಗಳಾಗಿದ್ದು ಇವು ಸಮಾರು 100 ವರ್ಷಗಳ ಹಳೆಯ ಕಟ್ಟಡಗಳಾಗಿವೆ. ಇವುಗಳ ಸುಸ್ಥಿತಿಯ ಬಗ್ಗೆ ಅಧ್ಯಯನ ನಡೆಸಲು Structural Engineer ರವರಿಂದ ತಾಂತ್ರಿಕ ಸಲಹೆ ಪಡೆಯುವದು ಅಗತ್ಯವಿರುವದನ್ನು ಮನಗಂಡು ತಾಂತ್ರಿಕ ಸಮಿತಿಯ ಶಿಫಾರಸ್ಸಿನ ಮೇಲೆ ಡಾ: ಅಜಿತ್ ಸಬ್ನಿಸ್ ಅವರ ಸೇವೆ ಪಡೆಯಲಾಗಿದೆ. ಈ ಕುರಿತು ಸಿಂಡಿಕೇಟ್ ಅನುಮೋದನೆಗಾಗಿ ವಿಷಯ ಮಂಡಿಸುವಲ್ಲಿ ವಿಳಂಬವಾಗಿದೆ. ಕಳೆದ ಸಿಂಡಿಕೇಟ್ ಸಭೆಯಲ್ಲಿ ವಿಷಯ ಮಂಡಿಸಲಾಗಿ, ಸಭೆಯಲ್ಲಿ, ಶ್ರೀ ಹೆಚ್.ಆರ್. ಸತೀಶ್ ರವರು ಮೇಲೆ ಹೆಳಿದ ಡಾ: ಅಜಿತ್ ಸಬ್ನಿಸ್ ರವರು ನೀಡಿದ ವರದಿ ಹಾಗೂ ಕೆಲಸಗಳನ್ನು ಪರಿಶೀಲಿಸಿ ವರದಿ ನೀಡಲು ತೀರ್ಮಾನಿಸಲಾಯಿತು. ಅದರಂತೆ ಶ್ರೀ ಹೆಚ್.ಆರ್. ಸತೀಶ್ ರವರು ವರದಿ ನೀಡಿದ್ದು ಅದನ್ನು Works Committee ಮಂದೆ ಮಂಡಿಸಲಾಗುವುದು. ಸಧ್ಯ ಡಾ: ಅಜಿತ್ ಸಬ್ನಿಸ್ ಅವರಿಗೆ ತಾಂತ್ರಿಕ ಸಲಹೆಗಾರರಾಗಿ ಕೆಲಸನಿರ್ವಹಿಸಲು ಆದೇಶ ನೀಡಿ ಸದರಿಯವರ ಸೇವೆ ಪಡೆದಿರುವುದರಿಂದ ಅವರಿಗೆ ಪಾವತಿಸ ಬೇಕಾದ ಗೌರವಧನ ತಿಂಗಳಿಗೆ ರೂ.50,000/- ನೀಡುವ ಕುರಿತು ಸಿಂಡಿಕೇಟ್ ಪರಿಗಣಿಸ ಬೇಕಾಗುತ್ತದೆ ಎಂದು ತಿಳಿಸಿದರು.

ಸದಸ್ಯರಾದ ಶ್ರೀಮತಿ ಜ್ಯೋತಿ ವಿಜಯ್ ರವರು ಚರ್ಚೆಯಲ್ಲಿ ಭಾಗವಹಿಸಿ, ವಿಶ್ವವಿದ್ಯಾಲಯ ನೀಡಿದ ಆದೇಶವನ್ನು ಗೌವರವಿಸಬೇಕಾಗುತ್ತದೆ. ಸಿಂಡೆಕೇಟ್ ಸಭೆಗೆ ಮಂಡಿಸಿ ಅನುಮೋದನೆ ಪಡೆಯುವಲ್ಲಿ ಆಗಿರುವ ವಿಳಂಬ ಆಡಳಿತಾತ್ಮಕ ಲೋಪ ಇದು ಉದ್ದೇಶಪೂರ್ವಕವೆಂದು ಪರಿಗಣಿಸಬಾರದೆಂದು ತಿಳಿಸಿದರು.

ಸಿಂಡಿಕೇಟ್ ತೀರ್ಮಾನ:

**ಚರ್ಚೆಯ ನಂತರ, ಡಾ: ಅಜಿತ್ ಸಬ್ನಿಸ್, ತಾಂತ್ರಿಕ ಸಲಹೆಗಾರರು, ಇವರಿಗೆ ವಿಶ್ವವಿದ್ಯಾಲಯ ನೀಡಿದ ಆದೇಶದ ದಿನಾಂಕದಿಂದ ಪ್ರತಿ ತಿಂಗಳಿಗೆ ರೂ.50,000/- ಗೌರವಧನ ಪಾವತಿಸ ಬೇಕೆಂದು ತೀರ್ಮಾನಿಸಲಾಯಿತು.**

**ಸದಸ್ಯರಾದ ಶ್ರೀ ಹೆಚ್.ಆರ್. ಸತೀಶ್ ರವರು ಸಲ್ಲಿಸಿದ ವರದಿಯನ್ನು ಮುಂದಿನ ಕಾಮಗಾರಿ ಸಮಿತಿ (Works Committee) ಪರಿಶೀಲನೆಗೆ ಮಂಡಿಸ ಬೇಕೆಂದು ತೀರ್ಮಾನಿಸಲಾಯಿತು.**

**ವಿಷಯ ಸಂಖ್ಯೆ 20: ಸದಸ್ಯರಾದ ಶ್ರೀ ಟಿ. ಹೆಚ್. ಶ್ರೀನಿವಾಸಯ್ಯ ನವರ ಪ್ರಸ್ತಾವನೆಯಂತೆ ವಿಶ್ವವಿದ್ಯಾಲಯದಲ್ಲಿ ಇರುವ ಒಟ್ಟು ಬ್ಯಾಂಕ್ ಖಾತೆಗಳ ಸಂಖ್ಯೆ ಹಾಗೂ ಅವುಗಳಲ್ಲಿ ಸ್ವೀಕೃತಿ ಖಾತೆ ಹಾಗೂ ಪಾವತಿ ಖಾತೆಗಳ ವಿವರಗಳನ್ನು ಮುಂದಿನ ಸಿಂಡಿಕೇಟ್ ಸಭೆಗೆ ಮಂಡಿಸ ಬೇಕೆಂದು ಸೂಚಿಸಲಾಯಿತು.**

ವಿಷಯ ಸಂಖ್ಯೆ 21: ಸರಕಾರಿ ಆರ್.ಸಿ. ಕಾಲೇಜಿನ ಆಂತರಿಕ ಅಂಕಗಳ ಕುರಿತು ರಚಿಸಲಾದ ಸಮಿತಿಯ ಶಿಫಾರಸ್ಸುಗಳ ಮೇಲೆ ಕೈಕೊಂಡ ಕ್ರಮದ ವಿವರವಾದ ವರದಿಯನ್ನು ಮುಂದಿನ ಸಿಂಡಿಕೇಟ್ ಸಭೆಗೆ ಮಂಡಿಸಲು ಸೂಚಿಸಲಾಯಿತು.

ವಿಷಯ ಸಂಖ್ಯೆ 24: Hon'ble Members wanted to know details regarding the filing of police complaint. Registrar informed that since Dr. Janardhanam, the former Director of CBSMS who is accused in the case is appointed as Registrar (Evaluation) of Bengaluru North University, by the Govt. of Karnataka, the Enquiry Report is submitted to the Government seeking permission to file the FIR. The Members took serious objection and insisted that, the criminal complaint has to be lodged immediately.

Dr. H.T. Arvind, Member of the Syndicate who was also the member of the Enquiry Committee explained in detail regarding the enquiry and recommendation, and sought details regarding Action Taken Report on the recommendations of the Enquiry Report. Other Members viz., Sri. Srinivasaiah, Smt. Jyothi Vijay, Sri. H.R. Sathish participated in the discussion and insisted to file the complaint immediately.

**Syndicate Decision:**

**The Syndicate directed and authorised the Registrar to file the Criminal complaint against the accused in the jurisdictional Police Station immediately.**

ವಿಷಯ ಸಂಖ್ಯೆ 25: ಶ್ರೀ ಟಿ. ಹೆಚ್. ಶ್ರೀನಿವಾಸಯ್ಯ ನವರು ಈ ಹಿಂದೆ, ವಿಶ್ವವಿದ್ಯಾಲಯದ ಸ್ಥಳವನ್ನು ಬೆಂಗಳೂರು ಮೆಟ್ರೋ ರೈಲು ಕಾರ್ಪೋರೇಶನ್ ರವರಿಗೆ ನೀಡಿದ್ದು, ಆವಾಗ ಬೇರೆಯವರಿಗೆ ಮಾರುಕಟ್ಟೆ ದರ ನೀಡಿ, ವಿಶ್ವವಿದ್ಯಾಲಯಕ್ಕೆ ಕಡಿಮೆ ದರ ನೀಡಿರುತ್ತಾರೆ. ಈ ಕುರಿತು ಮೆಟ್ರೋ ಅಧಿಕಾರಿಗಳಿಗೆ ಪತ್ರ ಬರೆದು ಬಾಕಿ ಹಣ ನೀಡಲು ಒತ್ತಾಯಿಸಬೇಕೆಂದು ತಿಳಿಸಿದರು. ಕುಲಪತಿಗಳು ವಿವರ ನೀಡಿ, ಈಗಾಗಲೇ ಮೆಟ್ರೋ ಅಧಿಕಾರಿಗಳಿಗೆ ಬಾಕಿ ಹಣ ನೀಡಲು ಪತ್ರ ಬರೆಯಲಾಗಿದೆ ಎಂದು ತಿಳಿಸಿದರು. ಇದಲ್ಲದೆ, ರಾಜ್ಯ ಲೆಕ್ಕ ಪತ್ರ ಇಲಾಖೆ ಮತ್ತು ಬೆಂಗಳೂರು ನ್ಯಾಯವಾದಿಗಳ ಸಂಘ ವಿಶ್ವವಿದ್ಯಾಲಯದ ಭೂಮಿಗಾಗಿ ಕೋರಿಕೆ ಸಲ್ಲಿಸಿದ್ದು, ವಸ್ತು ಸ್ಥಿತಿ ವಿವರಿಸಿ ವಿಶ್ವವಿದ್ಯಾಲಯಕ್ಕೆ ಸ್ಥಳದ ಕೊರತೆ ಇರುವುದರಿಂದ ಬೇರೆ ಇಲಾಖೆ ಸಂಘ ಸಂಸ್ಥೆಗಳಿಗೆ ಭೂಮಿ ನೀಡಬಾರದೆಂದು ಸರ್ಕಾರಕ್ಕೆ ವಿನಂತಿಸಲಾಗಿದೆ ಎಂದು ತಿಳಿಸಿದರು.

ಸಾಮಾನ್ಯ ಚರ್ಚೆಯ ವಿಷಯ ಸಂಖ್ಯೆ 6: ಕುಲಸಚಿವರು (ಮೌಲ್ಯಮಾಪನ) ರವರು ವಾಣಿಜ್ಯ ಸ್ನಾತಕೋತ್ತರ ವಿಭಾಗದ ಪರೀಕ್ಷಕರ ಮಂಡಳಿಯ ಅಧ್ಯಕ್ಷರಾಗಿ ಡಾ:ಎಂ. ಮುನಿನಾರಾಯಣಪ್ಪ, ಪ್ರಾಧ್ಯಾಪಕರು, ವಾಣಿಜ್ಯ ವಿಭಾಗ ಅವರನ್ನು ನೇಮಕ ಮಾಡುವ ಕುರಿತು ಕಳೆದ ಸಿಂಡಿಕೇಟ್ ಸಭೆಯಲ್ಲಿ ತೀರ್ಮಾನಿಸಲಾಗಿತ್ತು. ಈ ಕುರಿತು ವಾಣಿಜ್ಯ ನಿಕಾಯದ ಡೀನರು, ವಿಭಾಗದ ಮುಖ್ಯಸ್ಥರು ಹಾಗೂ ಅಧ್ಯಯನ ಮಂಡಳಿಯ ಅಧ್ಯಕ್ಷರು ಆಗಿರುವ ಡಾ. ಎಂ ಮುನಿರಾಜುರವರು ಆಕ್ಷೇಪಣೆ ವ್ಯಕ್ತಪಡಿಸಿ, ಅಧ್ಯಯನ ಮಂಡಳಿ ಶಿಫಾರಸ್ಸು ಮಾಡಿರುವಂತೆ ತಮ್ಮನ್ನು ವಾಣಿಜ್ಯ ಸ್ನಾತಕೋತ್ತರ ಪರೀಕ್ಷಕರ ಮಂಡಳಿಯ ಅಧ್ಯಕ್ಷರಾಗಿ ನೇಮಕ ಮಾಡಬೇಕೆಂದು ಕೋರಿರುವುದನ್ನು ತಿಳಿಸಿದರು. ಡಾ: ಮುನಿನಾರಾಯಣಪ್ಪ ಅವರು ಅಧ್ಯಯನ ಮಂಡಳಿ ಶಿಫಾರಸ್ಸು ಮಾಡಿರುವ ಪಟ್ಟಿಯಲ್ಲಿರುವ ಪರೀಕ್ಷಕರ ಸದಸ್ಯರನ್ನು ಹೊರತುಪಡಿಸಿ ಇನ್ನು ಬೇರೆ ಪರೀಕ್ಷಕರನ್ನು ಪಟ್ಟಿಯಲ್ಲಿ ಸೇರಿಸಲು ಅನುಮತಿ ನೀಡಬೇಕೆಂದು, ಹಾಗದಲ್ಲಿ ಸ್ನಾತಕೋತ್ತರ ಪರೀಕ್ಷಕರ ಮಂಡಳಿಯ ಅಧ್ಯಕ್ಷರಾಗಿ ಕೆಲಸ ನಿರ್ವಹಿಸಲು ಸಾಧ್ಯವಾಗುತ್ತದೆ ಎಂದು ತಿಳಿಸಿರುವುದನ್ನು ಸಭೆಗೆ ವಿವರಿಸಿದರು.

ಸಿಂಡಿಕೇಟ್ ತೀರ್ಮಾನ:

1) ಸಿಂಡಿಕೇಟ್ ಸಭೆ ಈ ಕುರಿತು ಕೂಲಂಕುಷವಾಗಿ ಚರ್ಚಿಸಿ, ನಿಯಮಾವಳಿಗಳ ಪ್ರಕಾರ ಸರದಿಯ ಮೇಲೆ ಪರೀಕ್ಷಕರ ಮಂಡಳಿಯ ಅಧ್ಯಕ್ಷರನ್ನು ನೇಮಕ ಮಾಡುವ ಕ್ರಮದಂತೆ ಡಾ:ಎಂ. ಮುನಿನಾರಾಯಣಪ್ಪ ಅವರನ್ನು ವಾಣಿಜ್ಯ ಸ್ನಾತಕೋತ್ತರ ಪರೀಕ್ಷಕರ ಮಂಡಳಿಯ ಅಧ್ಯಕ್ಷರಾಗಿ ನೇಮಕ ಮಾಡಲು ತೆಗೆದುಕೊಂಡ ಹಿಂದಿನ ಸಭೆಯ ನಿರ್ಣಯಕ್ಕೆ ಬದ್ಧವಾಗಿರಲು ತೀರ್ಮಾನಿಸಿತು.

2) ವಾಣಿಜ್ಯ ಸ್ನಾತಕೋತ್ತರ ಪರೀಕ್ಷಕರ ಪಟ್ಟಿಯಲ್ಲಿ ಡಾ:ಎಂ. ಮುನಿನಾರಾಯಣಪ್ಪ ಅವರ ಹೆಸರನ್ನು ಸೇರಿಸಲು ತೀರ್ಮಾನಿಸಲಾಯಿತು.

3) ಡಾ: ಎಂ. ಮುನಿನಾರಾಯಣಪ್ಪ ಅವರು ವಾಣಿಜ್ಯ ಸ್ನಾತಕೋತ್ತರ ಅಧ್ಯಯನ ಮಂಡಳಿ ಶಿಫಾರಸ್ಸು ಮಾಡಿರುವ ಪರೀಕ್ಷಕರ ಪಟ್ಟಿಯ ಪ್ರಕಾರ ಎಲ್ಲಾ ಪರೀಕ್ಷೆಗಳಿಗೆ ಸಂಬಂಧಿಸಿದ ಕೆಲಸ ಮಾಡಿಸಬೇಕೆಂದು ಸೂಚಿಸಲಾಯಿತು.

4) ಮೇಲಿನ ತೀರ್ಮಾನಕ್ಕೆ ಡಾ: ಎಂ.ಮುನಿನಾರಾಯಣಪ್ಪ ಅವರು ಬದ್ದರಾಗಿರಬೇಕೆಂದು ಒಂದು ವೇಳೆ ಈ ತೀರ್ಮಾನಕ್ಕೆ ವ್ಯತಿರಿಕ್ತವಾಗಿ ನಡೆದುಕೊಂಡರೆ, ವಾಣಿಜ್ಯ ವಿಭಾಗದ ಸಹ ಪ್ರಧ್ಯಾಪಕಿಯಾದ ಡಾ: ಕೆ.ಆರ್.ಜಲಜಾ ರವರನ್ನು ವಾಣಿಜ್ಯ ಸ್ನಾತಕೋತ್ತರ ಪರೀಕ್ಷಕರ ಮಂಡಳಿಯ ಅಧ್ಯಕ್ಷರಾಗಿ ನೇಮಕಮಾಡಿ ಪರೀಕ್ಷಾ ಕೆಲಸಗಳನ್ನು ನಿರ್ವಹಿಸಬೇಕೆಂದು ತೀರ್ಮಾನಿಸಲಾಯಿತು.

| | |
|---|---|
| ವಿಷಯ ಸಂಖ್ಯೆ–3: | Ratification of Fee Structure for admission to Ph.D Programme 2019 in the Faculty of Arts, Science, Commerce and Education of BCU.<br><br>**Resolution**:<br><br>**The Syndicate resolved to approve and ratify the Fee structure for admission to Ph.D programme in the Faculty of Arts, Science, Commerce and Education for the year 2019-20.** |
| ವಿಷಯ ಸಂಖ್ಯೆ–4: | Appointment of Chairpersons to the Board of Studies for various Subjects in Arts, Science & Commerce Faculties as per Statutes 8.2.<br><br>**Resolution**:<br><br>**The Syndicate resolved to continue the existing Boards of Studies for Post Graduate and Under Graduate Subjects.** |
| ವಿಷಯ ಸಂಖ್ಯೆ–5: | ವಿಶ್ವವಿದ್ಯಾಲಯದ ಹಣಕಾಸು ಸಮಿತಿಗೆ ಒಬ್ಬ ಸಿಂಡಿಕೇಟ್ ಸದಸ್ಯರನ್ನು ನಾಮನಿರ್ದೇಶನ ಮಾಡುವ ಕುರಿತು<br><br>ಸಿಂಡಿಕೇಟ್ ನಿರ್ಣಯ:<br><br>ಸಿಂಡಿಕೇಟ್ ಸದಸ್ಯರಾದ ಶ್ರೀ ಆರ್.ಕೆ. ಚಂದ್ರನಾಥ ಅವರನ್ನು ಹಣಕಾಸು ಸಮಿತಿಗೆ ನಾಮಕರಣ ಮಾಡಲು ಸರ್ವಾನುಮತದ ಒಪ್ಪಿಗೆ ನೀಡಲಾಯಿತು. |
| ವಿಷಯ ಸಂಖ್ಯೆ–6: | Proceedings of the meeting of the Library Committee held on 17.10.2019<br>ಸಿಂಡಿಕೇಟ್ ನಿರ್ಣಯ:<br><br>ಗ್ರಂಥಾಲಯ ಸಮಿತಿಯ ರಚನೆಗೆ ಸಿಂಡಿಕೇಟ್ ಅನುಮೋದನೆ ಪಡೆಯ ಬೇಕಾಗಿತ್ತು ಎಂದು ಸದಸ್ಯರು ಅಭಿಪ್ರಾಯ ಪಟ್ಟರು. ಗ್ರಂಥಾಲಯ ಸಮಿತಿಯಲ್ಲಿ ಸದಸ್ಯರಾದ ಡಾ: ಆಶಾ ಗಣೇಶ್ ಅವರ ಬದಲಿಗೆ ಶ್ರೀ ಟಿ.ಹೆಚ್. ಶ್ರೀನಿವಾಸಯ್ಯ ಅವರನ್ನು ಸದಸ್ಯರಾಗಿ ನೇಮಕಮಾಡಿ ಗ್ರಂಥಾಲಯ ಸಮಿತಿ ಪುನರ್ ರಚಿಸಿ ಸಿಂಡಿಕೇಟ್ ಸಭೆಗೆ ಮಂಡಿಸಬೇಕೆಂದು ತೀರ್ಮಾನಿಸಲಾಯಿತು.<br>ಗ್ರಂಥಾಲಯ ಸಮಿತಿಯ ವಿಷಯ ಸಂಖ್ಯೆ 1 ಮತ್ತು 2 ರಲ್ಲಿ ಶಿಫಾರಸ್ಸು ಮಾಡಿರುವ ಪುಸ್ತಕ ಹಾಗೂ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ನಿಯತಕಾಲಿಕೆಗಳ ಖರೀದಿಗೆ ಒಪ್ಪಿಗೆ ನೀಡಲಾಯಿತು. |

| | |
|---|---|
| | ವಿಷಯ ಸಂಖ್ಯೆ 6 ಕ್ಕೆ ಘಟನೋತ್ತರ ಅನುಮೋದನೆ ನೀಡಲಾಯಿತು.<br>ವಿಷಯ ಸಂಖ್ಯೆ 7 ಮತ್ತು 8 ರ ಸಭೆಯ ಶಿಫಾರಸ್ಸುಗಳನ್ನು ಒಪ್ಪಿಕೊಳ್ಳಲಾಯಿತು.<br>ಉಳಿದಿರುವ ವಿಷಯ ಸಂಖ್ಯೆ 3, 4, 5 ಮತ್ತು 9 ಗಳನ್ನು ಪುನರ್ ರಚಿತ ಗ್ರಂಥಾಲಯ ಸಮಿತಿ ಸಭೆಯಲ್ಲಿ ಮಂಡಿಸಬೇಕೆಂದು ಸೂಚಿಸಲಾಯಿತು. |
| ವಿಷಯ ಸಂಖ್ಯೆ–7: | ಸಂಚಿತ ಸಂಭಾವನೆ ನೌಕರರ ಸೇವೆಯನ್ನು ಮುಂದುವರೆಸಿರುವ ಕ್ರಮದ ಘಟನೋತ್ತರ ಅನುಮೋದನೆ ಕುರಿತು<br><br>ಸಿಂಡಿಕೇಟ್ ನಿರ್ಣಯ:<br>ವಿಶ್ವವಿದ್ಯಾಲಯದ ದೈನಂದಿನ ಕೆಲಸಗಳಿಗಾಗಿ ಸೇವೆ ಸಲ್ಲಿಸುತ್ತಿರುವ ಸಿಬ್ಬಂದಿಗಳ ಹುದ್ದೆಗಳ ಹಾಗೂ ಮಂಜೂರಾಗಿರುವ / ಸರ್ಕಾರಕ್ಕೆ ಮಂಜೂರಾತಿಗಾಗಿ ಸಲ್ಲಿಸಿರುವ ಹುದ್ದೆಗಳ ವಿವರಗಳನ್ನು ಕುಲಪತಿಗಳು ಸಭೆಗೆ ಮಂಡಿಸಿದರು.<br><br>ಪ್ರಸ್ತಾವನೆಯಲ್ಲಿ ನಮೂದಿಸಿದ ಹುದ್ದೆಗಳಲ್ಲದೆ, ಗ್ರಂಥಾಲಯ ಸಹಾಯಕರು, ಕ್ರೀಡಾ ವಿಭಾಗ, ಎಲೆಕ್ಟ್ರಿಶಿಯನ್ ಹುದ್ದೆಗಳನ್ನು ಕೆ.ಟಿ.ಪಿ.ಪಿ ಕಾಯ್ದೆ ಪ್ರಕಾರ ಹೊರಗುತ್ತಿಗೆ ಆಧಾರದ ಮೇಲೆ ಸೇವೆ ಪಡೆದುಕೊಳ್ಳಬೇಕೆಂದು ತೀರ್ಮಾನಿಸಲಾಯಿತು.<br>ಸಂಚಿತ ಸಂಭಾವನೆ ನೌಕರರ ಸೇವೆಯನ್ನು ದಿನಾಂಕ 01.11.2019 ರಿಂದ 31.01.2020 ರವರೆಗೆ ಮುಂದುವರೆಸಿರುವ ಕ್ರಮಕ್ಕೆ ಘಟನೋತ್ತರ ಅನುಮೋದನೆ ನೀಡಲಾಯಿತು. ಹಾಗೂ ಸದರಿ ಸಂಚಿತ ಸಂಭಾವನೆ ನೌಕರರ ಸೇವೆಯನ್ನು ಫೆಬ್ರವರಿ ತಿಂಗಳ ಅಂತ್ಯದ ವರೆಗೆ ಮುಂದುವರೆಸಲು ಮತ್ತು ಹೊರಗುತ್ತಿಗೆ ಪ್ರಕ್ರಿಯೆ ಎರಡು ತಿಂಗಳಲ್ಲಿ ಪೂರ್ಣಗೊಳಿಸ ಬೇಕೆಂದು ಅದೇಶಿಸಲಾಯಿತು. |
| ವಿಷಯ ಸಂಖ್ಯೆ–8: | ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ಶೈಕ್ಷಣಿಕ ವಿಭಾಗಕ್ಕೆ ಸಂಚಿತ ಸಂಭಾವನೆ ಮೇರೆಗೆ ತಾತ್ಕಾಲಿಕವಾಗಿ ನಿವೃತ್ತ ಅಧೀಕ್ಷಕರನ್ನು ನೇಮಕಾತಿ ಮಾಡಿರುವ ಬಗ್ಗೆ ಘಟನೋತ್ತರ ಅನುಮೋದನೆ ಕುರಿತು<br><br>ಸಿಂಡಿಕೇಟ್ ನಿರ್ಣಯ:<br>ಶ್ರೀ ಎಸ್. ಮೋಹನ್ ಅವರ ಸೇವೆಯನ್ನು ಮುಂದುವರೆಸಿರುವ ಕ್ರಮಕ್ಕೆ ಘಟನೋತ್ತರ ಅನುಮೋದನೆ ನೀಡಲಾಯಿತು. |
| ವಿಷಯ ಸಂಖ್ಯೆ–9: | ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದಲ್ಲಿ ಸಂಚಿತ ಸಂಭಾವನೆ ಮೇರೆಗೆ ಸೇವೆ ಸಲ್ಲಿಸುತ್ತಿರುವ ಸಹಾಯಕ ಗ್ರಂಥಪಾಲಕರ ಸೇವಾವಧಿಯನ್ನು ಮುಂದುವರೆಸುವ ಕುರಿತು<br>ಸಿಂಡಿಕೇಟ್ ನಿರ್ಣಯ:<br>ಸಂಚಿತ ಸಂಭಾವನೆ ಮೇರೆಗೆ ಸೇವೆ ಸಲ್ಲಿಸಿತ್ತಿರುವ ಸಹಾಯಕ ಗ್ರಂಥಪಾಲಕರ |

| | |
|---|---|
| | ಸೇವಾವಧಿಯನ್ನು ದಿನಾಂಕ 04.01.2020 ರಿಂದ ಫೆಬ್ರವರಿ ತಿಂಗಳ ಅಂತ್ಯದ ವರೆಗೆ ಮುಂದುವರೆಸಲು ಹಾಗೂ ವಿಷಯ ಸಂಖ್ಯೆ 7ರಲ್ಲಿ ತೀರ್ಮಾನಿಸಿದಂತೆ, ಈ ಹುದ್ದೆಗಳನ್ನು ಸರ್ಕಾರದ ಮಂಜೂರಾತಿ ನಿರೀಕ್ಷಿಸಿ ಹೊರಗುತ್ತಿಗೆ ಆಧಾರದ ಮೇಲೆ ಸೇವೆ ಪಡೆಯಲು ಕ್ರಮ ಕೈಕೊಳ್ಳಲು ಆದೇಶಿಸಲಾಯಿತು. |
| ವಿಷಯ ಸಂಖ್ಯೆ–10: | ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದಲ್ಲಿ ಸಂಚಿತ ಸಂಭಾವನೆ ಮೇರೆಗೆ ಸೇವೆ ಸಲ್ಲಿಸುತ್ತಿರುವ ತೋಟಪಾಲಕರ ಸೇವಾವಧಿಯನ್ನು ಮುಂದುವರೆಸಲು ಕುರಿತು<br><br>ಸಿಂಡಿಕೇಟ್ ನಿರ್ಣಯ:<br>ಪ್ರಸ್ತಾವನೆಯಲ್ಲಿ ನಮೂದಿಸಿದ ಸಂಚಿತ ಸಂಭಾವನೆ ಮೇರೆಗೆ ಸೇವೆ ಸಲ್ಲಿಸುತ್ತಿರುವ ತೋಟಗಾರಿಕಾ ಸಿಬ್ಬಂದಿಗಳ ಸೇವೆ ಮುಂದುವರೆಸಿರುವುದಕ್ಕೆ ಘಟನೋತ್ತರ ಅನುಮೋದನೆ ನೀಡಿ, ಸದರಿ ತೋಟಗಾರಿಕೆ ಕೆಲಸಕಾರ್ಯಗಳಿಗೆ 10 ಜನ ಹಾಗೂ ಸ್ವಚ್ಚತಾ ಕೆಲಸಕ್ಕಾಗಿ 30 ಜನರ ಸೇವೆಯನ್ನು ವಿಷಯ ಸಂಖ್ಯೆ 7 ರಲ್ಲಿ ತೀರ್ಮಾನಿಸಿದಂತೆ ಹೊರಗುತ್ತಿಗೆ ಆಧಾರದ ಮೇಲೆ ಪಡೆದುಕೊಳ್ಳ ಬೇಕೆಂದು ತೀರ್ಮಾನಿಸಲಾಯಿತು.<br><br>ಹೊರಗುತ್ತಿಗೆ ಪ್ರಕ್ರಿಯೆ ಎರಡು ತಿಂಗಳಲ್ಲಿ ಪೂರ್ಣಗೊಳಿಸಬೇಕೆಂದು ಸೂಚಿಸಿ ಸದರಿ ಸಿಬ್ಬಂದಿಗಳ ಸೇವೆಯನ್ನು ದಿನಾಂಕ 04.01.2020 ರಿಂದ ಫೆಬ್ರವರಿ ತಿಂಗಳ ಅಂತ್ಯದ ವರೆಗೆ ಮುಂದುವರೆಸಲು ತೀರ್ಮಾನಿಸಲಾಯಿತು. |
| ವಿಷಯ ಸಂಖ್ಯೆ–11: | ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ಶಾಸನಬದ್ಧ ಅಧಿಕಾರಿಗಳ ವಾಹನ ಚಾಲಕರಿಗೆ ವಿಶೇಶ ಭತ್ಯೆ ನೀಡುವ ಕುರಿತು<br><br>ಸಿಂಡಿಕೇಟ್ ನಿರ್ಣಯ:<br>ಚರ್ಚೆಯ ನಂತರ, ವಾಹನ ಚಾಲಕರಿಗೆ ಮಾಹೆಯಾನ ರೂ.3,000/– ಗಳ ವಿಷೇಶ ಭತ್ಯ ನೀಡಲು ತೀರ್ಮಾನಿಸಲಾಯಿತು. |
| ವಿಷಯ ಸಂಖ್ಯೆ–12: | Consideration of the proceedings of the meeting of the Principals of the affiliated Colleges of BCU held on 13th & 14th November 2019- relating to Online Affiliation process.<br><br>Dr. R. Parvathi, Dr. B.A. Anuradha, Dr. D.G. Shrinivasmurthy, expressed their experiences regarding the online affiliation system introduced during 2019-20. However, they mentioned that the methodology adopted and the data entry and processing did not had any problem. However at the output generation, there was some mismatch, which had caused problem for some colleges in getting renewal of permanent affiliation. |

Other members' viz., Dr. H.T. Arvind, Prof. M. Pandurangappa, Prof. V.R. Devaraj Sri. H.T. Srinivasaiah also participated in the discussion and expressed their opinion and suggested that if the lacunae of the previous year are corrected, the University may go for online system.

Smt. Jyothi Vijay while explaining her experience of Bangalore University and the logic of the online affiliation system briefed the stages involved in the process and suggested that the University should prefer digitalisation of online system.

Vice-Chancellor informed the reasons which lead to the problem created during last year. He further informed that, in the meanwhile several rounds of consultations have been held. The format has been strictly complied with the UGC Regulations. Government also wants to implement this for all the Universities. As per the Government Notification UGC Regulations have to be followed strictly for new Colleges and some time limit is given for existing Colleges.

With the above clarification he suggested that the Syndicate may constitute a Committee to verify the software in detail from the data entry level to output and submit a report to Syndicate. Based on the report of the Committee a final decision could be taken.

**Resolution**:

**The Syndicate resolved to constitute the following Committee**

**1) The Registrar .. Chairperson**
**2) Prof.M. Pandurangappa .. Member**
**3) Dr.R. Asha Ganesh .. Member**
**4) Dr.R. Parvathi .. Member**
**5) Dr. B.A. Anuradha .. Member**
**6) Dr. D.G. Srinivasa Murthy.. Member**
**7) Dr.E.B. Rajesh .. Member**
**8) Ms. Jyothi Vijay .. Member**
**9) Dr. Thangavel, NIC .. Member**
**10) Sri. Arun Seetharam .. Member**

**The Committee shall verify the software and the parameters involved therein keeping in view the problems faced during the last year.**

| | |
|---|---|
| | **2) The Committee shall also go into the details of the financial requirements to be paid to the service provider and mode of payment.**<br>**3) After detailed verification the Committee shall place its report before the Syndicate for final decision.**<br>**4) In view of urgency the Committee is requested to submit its report within 10 days.** |
| ವಿಷಯ ಸಂಖ್ಯೆ–13: | ಸರ್ಕಾರದ ಆದೇಶ ದಿನಾಂಕ 07.11.2019 ಅನುಸಾರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮತ್ತು ರಾಜ್ಯ ಲೆಕ್ಕ ಪತ್ರ ಹಾಗೂ ಪರಿಶೋಧನಾ ಇಲಾಖೆಯಿಂದ ನಿಯೋಜನೆ ಮೇಲೆ ನೇಮಿಸಿಕೊಳ್ಳುವ ಕುರಿತು<br>ಮುಂದೂಡಲಾಯಿತು |
| ವಿಷಯ ಸಂಖ್ಯೆ–14: | 70 ವರ್ಷ ವಯಸ್ಸಿನ ಒಳಗೆ ಇರುವ ನಿವೃತ್ತ ಅಧಿಕಾರಿ/ನೌಕರರ ಸೇವೆಯನ್ನು ಮುಂದುವರೆಸುವ ಕುರಿತು.<br><br>ಕುಲಪತಿಗಳು ವಿಶ್ವವಿದ್ಯಾಲಯದಲ್ಲಿ ದೈನಂದಿನ ಕಾರ್ಯನಿವಹಿಸಲು ಸೇವೆ ಸಲ್ಲಿಸುತ್ತಿರುವ ನಿವೃತ್ತ ಸಿಬ್ಬಂದಿಗಳ ವಿವರ ಹಾಗೂ ಸರ್ಕಾರದಿಂದ ಮಂಜೂರಾದ ಹುದ್ದೆಗಳ ವಿವರಗಳನ್ನು ಸಿಂಡಿಕೇಟ್ ಸಭೆಗೆ ವಿವರಿಸಿದರು.<br><br>ಸಿಂಡಿಕೇಟ್ ನಿರ್ಣಯ:<br><br>**70 ವರ್ಷ ಪೂರ್ಣಗೊಳಿಸಿದ ನಿವೃತ್ತ ಸಿಬ್ಬಂದಿಗಳನ್ನು ಕರ್ತವ್ಯದಿಂದ ಬಿಡುಗಡೆಗೊಳಿಸಲು ಹಾಗೂ ಉಳಿದ ನಿವೃತ್ತ ಸಿಬ್ಬಂದಿಗಳನ್ನು ದಿನಾಂಕ 01.01.2020 ರಿಂದ 6 ತಿಂಗಳ ಅವಧಿಗೆ ಅಥವಾ ಖಾಯಂ ಸಿಬ್ಬಂದಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುವವರೆಗೆ ಇದರಲ್ಲಿ ಯಾವುದು ಮೊದಲು ಆ ಅವಧಿಯ ವರೆಗೆ ಮುಂದುವರೆಸಲು ತೀರ್ಮಾನಿಸಲಾಯಿತು.** |
| ವಿಷಯ ಸಂಖ್ಯೆ–15 | ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದಲ್ಲಿ ಹೊಸದಾಗಿ ಬೋಧಕೇತರ ಹುದ್ದೆಗಳನ್ನು ಸೃಜಿಸುವ ಬಗ್ಗೆ ಹಾಗೂ ನೇಮಕಾತಿಗಳನ್ನು ಮಾಡಿಕೊಳ್ಳಲು ಅನುಮತಿಸಿರುವ ಸರ್ಕಾರಿ ಆದೇಶ ಸಂಖ್ಯೆ: ಇಡಿ 493 ಯು.ಬಿ.ವಿ 2017(ಭಾಗ–4) ದಿನಾಂಕ 07.11.2019 ಕುರಿತು.<br>Vice-Chancellor informed the Syndicate that the Government has permitted the University to establish the new Post Graduate Departments and Creation of Teaching and Non- teaching posts. As per the directions of the Government, the University has to constitute a Statute drafting Committee to draft the Statutes required for the University. |

**Resolution**:

**The Syndicate unanimously resolved to constitute the following Statute drafting Committee:**

1) **Dr. Thimmegowda, .. Chairperson**
**Former Vice-Chancellor,BUB.**

2) **Dr. Shivalingaiah. .. Member**
**Former Vice-Chancellor,**
**Karnataka State Open University**

3) **Dr.V.R. Devaraj .. Member**
**Professor, Dept. of Biochemistry,BCU.**

4) **Dr.H.T. Arvind .. Member**
**Syndicate Member**

5) **Sri.T.H. Srinivasaiah .. Member**
**Syndicate Member**

6) **One Retired Officer having experience of working as Joint Secretary / Deputy Secretary of DPAR as Member**

7) **Registrar .. Member Secretary**

**The Committee may also seek the advice of Prof. V.B. Coutinho and Prof. H.A. Ranganath, former Vice-Chancellors of Bangalore University whenever required.**

**The Committee is required to take-up the drafting of Statutes relating to;**

**i) Appointment of Teachers and other academic staff and the maintenance of standards in Bengaluru Central University and the implementation of UGC Pay Scales revised from 01.01.2016.**

**ii) Establishment of new PG Departments and creation of posts as per Government Order**

| | |
|---|---|
| | iii) The manner of conducting interview for appointment and promotion of teachers and other academic staff in the Bengaluru Central University.<br>iv) Cadre and Recruitment Rules for appointment of Non-teaching employees for BCU<br>v) Such other statutes as may be assigned to it from time to time. |
| ವಿಷಯ ಸಂಖ್ಯೆ –16 | ರಜಾ ಅವಧಿಯಲ್ಲಿ ಆಡಳಿತಾತ್ಮಕ ಕಾರ್ಯನಿರ್ವಹಿಸುತ್ತಿರುವ ವಿಶ್ವವಿದ್ಯಾಲಯದ ಅತಿಥಿ ಉಪನ್ಯಾಸಕರಿಗೆ ನಿಗದಿತ ಸಂಭಾವನೆ ನೀಡುವ ಕುರಿತು<br><br>ಮುಂದೂಡಲಾಯಿತು |
| ವಿಷಯ ಸಂಖ್ಯೆ –17 | ವಿಶ್ವವಿದ್ಯಾಲಯದ ಕ್ರಿಕೆಟ್ ಹಾಗೂ ಇತರೆ ಮೈದಾನಗಳನ್ನು ಕೆಲವು ಸಂಸ್ಥೆಗಳು ಬಾಡಿಗೆ ಪಡೆದು ತರಬೇತಿಗೆ ಬರುವ ಕ್ರೀಡಾ ಪಟುಗಳಿಂದ ಹೆಚ್ಚಿನ ಹಣ ಪಡೆಯುತ್ತಿರುವುದರ ಕುರಿತು ವಿವರಣೆ.<br><br>ಮುಂದೂಡಲಾಯಿತು |
| ವಿಷಯ ಸಂಖ್ಯೆ–18 | ಹಿಂದಿ ಮತ್ತು ರಾಜ್ಯಶಾಸ್ತ್ರ ಪಠ್ಯವಿಷಯದ ಬದಲಾವಣೆ ಮತ್ತು ಮರುಪರೀಕ್ಷೆಗೆ ಅನುಮತಿ ಕೋರಿರುವ ಬಗ್ಗೆ.<br><br>ಮುಂದೂಡಲಾಯಿತು |
| ವಿಷಯ ಸಂಖ್ಯೆ–19 | ಬಿ.ಎಂ. ಪ್ರೀತು, ಬಿ.ಬಿ.ಎ 2ನೇ ಸೆಮೆಸ್ಟರ್, SSMRV ಕಾಲೇಜು, ಇವರ OMR ಕಳೆದಿರುವ ಕುರಿತು ರಚಿಸಲಾದ ಸಮಿತಿಯ ವರದಿ ಬಗ್ಗೆ.<br><br>ಮುಂದೂಡಲಾಯಿತು |
| ವಿಷಯ ಸಂಖ್ಯೆ–20 | Reports of the Committees constituted for renewal of recognition of Research Centres in the Faculties of Commerce and Education<br><br>ಮುಂದೂಡಲಾಯಿತು |
| ವಿಷಯ ಸಂಖ್ಯೆ–21 | ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ವಿವಿಧ ಚಟುವಟಿಕೆಗಳಿಂದ ಸಂದಾಯವಾಗುವ ವಿವಿಧ ರಾಜಸ್ವ ಬಂಡವಾಳ ಸ್ವೀಕೃತಿಗಳನ್ನು ಸರ್ಕಾರ ಹೊರಡಿಸಿರುವ ವಿವಿಧ ಆದೇಶಗಳ ನಿಯಮಾನುಸಾರ ಬ್ಯಾಂಕುಗಳಲ್ಲಿ ನಿಶ್ಚಿತ ಬಂಡವಾಳ ಹೂಡಿಕೆ ಮಾಡುವ ಬಗ್ಗೆ<br><br>ಮುಂದೂಡಲಾಯಿತು |

| | |
|---|---|
| ಸಾಮಾನ್ಯ ವಿಷಯಗಳ ಚರ್ಚೆ: 1 | ಸದಸ್ಯರಾದ ಶ್ರೀ ಟಿ. ಹೆಚ್. ಶ್ರೀನಿವಾಸಯ್ಯ ಅವರು ಸರ್ಕಾರದೊಂದಿಗೆ ಅಧಿಕ ಸಂಖ್ಯೆಯ ಪತ್ರವ್ಯವಹಾರಗಳನ್ನು ಕುಲಪತಿಗಳು ಮಾಡುತ್ತಿರುವುದು ಗಮನಿಸಲಾಗಿದೆ. ಸರ್ಕಾರ / ಯು.ಜಿ.ಸಿ ಇತ್ಯಾದಿ ಸಂಸ್ಥೆಗಳಿಂದ ಪತ್ರ ವ್ಯವಹಾರಗಳನ್ನು ಕುಲಪತಿಗಳ ನಿರ್ದೇಶನದಮೇರೆಗೆ ಕುಲಸಚಿವರು ಮಾಡಬೇಕಾಗುತ್ತದೆ ಎಂದು ತಿಳಿಸಿದರು.<br><br>**ವಿಶ್ವವಿದ್ಯಾಲಯದ ರಾಜ್ಯ ಸರ್ಕಾರ / ಕೇಂದ್ರ ಸರ್ಕಾರ/ ಯು.ಜಿ.ಸಿ/ನ್ಯಾಕ್ ಇತ್ಯಾದಿ ಸಂಸ್ಥೆಗಳೊಂದಿಗೆ ಮಾಡುವ ಪತ್ರವ್ಯವಹಾರಗಳನ್ನು ಕುಲಪತಿಗಳ ನಿರ್ದೇಶನದ ಮೇರೆಗೆ ಕುಲಸಚಿವರು ನಿರ್ವಹಿಸಬೇಕೆಂದು ತೀರ್ಮಾನಿಸಲಾಯಿತು.** |
| ಸಾಮಾನ್ಯ ವಿಷಯಗಳ ಚರ್ಚೆ:2 | ಸದಸ್ಯರಾದ ಶ್ರೀ ಟಿ. ಹೆಚ್. ಶ್ರೀನಿವಾಸಯ್ಯ ನವರು ರಾಜ್ಯ ಸರ್ಕಾರ ಪ್ರಾರಂಭಿಸಲು ಉದ್ದೇಶಿಸಿರುವ Women's Incubation Centre ಗಾಗಿ ವಿಶ್ವವಿದ್ಯಾಲಯದಲ್ಲಿ ಸ್ಥಳಾವಕಾಶ ನೀಡಬೇಕೆಂದು ಪ್ರಸ್ತಾಪಿಸಿದರು.<br><br>ಕುಲಪತಿಗಳು ಈ ಯೋಜನೆಯ ವಿವರಗಳನ್ನು ಒಳಗೊಂಡ ಒಂದು ಪ್ರಸ್ತಾವನೆ ಸಲ್ಲಿಸಲು ತಿಳಿಸಿದರು. |
| ಸಾಮಾನ್ಯ ವಿಷಯಗಳ ಚರ್ಚೆ:3 | "ಬೆಂಗಳೂರು ಮಿರರ್" ಪತ್ರಿಕೆಯಲ್ಲಿ "Double Tendering" ಕುರಿತು ಪ್ರಕಟವಾದ ವಿಷಯ ಕುರಿತು ಪ್ರಸ್ತಾಪಿಸಲು ಸದಸ್ಯರಾದ ಡಾ:ಹೆಚ್.ಟಿ. ಅರವಿಂದ ಹಾಗೂ ಶ್ರೀ ಹೆಚ್.ಆರ್. ಸತೀಶ್ ರವರಿಗೆ ಕುಲಪತಿಗಳು ಅನುಮತಿ ನೀಡಿದರು. ಅದರಂತೆ ಸದಸ್ಯರು ಪತ್ರಿಕೆಯಲ್ಲಿ ಪ್ರಕಟವಾದ ವರದಿಯನ್ನು ಪ್ರಸ್ತಾಪಿಸಿ ರಾಜ್ಯದ 4-5 ವಿಶ್ವವಿದ್ಯಾಲಯಗಳಲ್ಲಿ ಈ ರೀತಿಯ Double Tendering ಆಗಿರುವ ಕುರಿತು ವರದಿಯಾಗಿದೆ ಇದರಲ್ಲಿ ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯವು ಸೇರಿರುವದರಿಂದ ಈ ಕುರಿತು ವಿವರಗಳನ್ನು ನೀಡಬೇಕೆಂದು ಕೋರಿದರು.<br><br>ಕುಲಸಚಿವರು (ಮೌಲ್ಯಮಾಪನ) ರವರು ವಿವರಗಳನ್ನು ನೀಡುತ್ತಾ, ವಿಶ್ವವಿದ್ಯಾಲಯದಲ್ಲಿ ಎರಡು ಹಂತದ ಕೆಲಸಗಳಿಗಾಗಿ ಟೆಂಡರ್ ಕರೆಯಲಾಗಿದ್ದು, (1) E-Governance: ವಿದ್ಯಾರ್ಥಿಗಳ ಪ್ರವೇಶ ಅನುಮೋದನೆಯಿಂದ ಹಾಲ್ ಟಿಕೆಟ್ ನೀಡುವ ವರೆಗಿನ ಕೆಲಸ ಹಾಗೂ (2) Examination Processing System (ಪರೀಕ್ಷಾ ಕೆಲಸಗಳ ನಿರ್ವಹಣೆ): ಉತ್ತರ ಪತ್ರಿಕೆಗಳನ್ನು ಸ್ವೀಕರಿಸುವುದು, ಕೋಡಿಂಗ್ – ಡಿ-ಕೋಡಿಂಗ್, ಪ್ರತಿ ದಿವಸದ ಮೌಲ್ಯಮಾಪನ ನಿರ್ವಹಣೆ, ಅಂಕಗಳನ್ನು ದಾಖಲಿಸುವುದು, ಪರೀಕ್ಷಾ ಫಲಿತಾಂಶ ಪ್ರಕಟಿಸುವುದು ಇತ್ಯಾದಿ. ಹೀಗೆ ಎರಡು ಟೆಂಡರ್‌ಗಳನ್ನು KTPP Act ಪ್ರಕಾರ ಕರೆದು Logysis ಹಾಗೂ Uniclaire ಎಂಬ ಸಂಸ್ಥೆಗಳಿಗೆ ಟೆಂಡರ್ ನೀಡಲಾಗಿದೆ ಎಂದು ತಿಳಿಸಿದರು. ವಿಶ್ವವಿದ್ಯಾಲಯದ ಪರೀಕ್ಷಾ ವಿಭಾಗದಲ್ಲಿ ಕಡಿಮೆ ಸಂಖ್ಯೆಯ ಸಿಬ್ಬಂದಿಗಳಿದ್ದು, ಮೇಲೆ ನಮೂದಿಸಿದ ಎರಡು ಸಂಸ್ಥೆಗಳಿಗೆ ಕೆಲಸ ವಹಿಸಿರುವುದರಿಂದ, ಪರೀಕ್ಷಾ ಕೆಲಸಗಳನ್ನು ಸುಗಮವಾಗಿ ಜರುಗಿಸಲು |

| | |
|---|---|
| | ಸಾಧ್ಯವಾಗಿದೆ. ಮಹಾವಿದ್ಯಾಲಯಗಳ ಪ್ರಾಂಶುಪಾಲರು ಸಹ ಈ ವ್ಯವಸ್ಥೆ ಉತ್ತಮವಾಗಿದೆ ಎಂದು ತಿಳಿಸಿರುತ್ತಾರೆ.<br><br>ಕುಲಪತಿಗಳು ಸಹ ವಿವರ ನೀಡಿ KTPP Act ನಿಯಮಾವಳಿಗಳ ಪ್ರಕಾರ ಟೆಂಡರ್ ಕರೆದು, ಪರಿಣಿತರ ಸಮಿತಿ ಪರಿಶೀಲನೆ ಬಳಿಕ ಕೆಲಸ ವಹಿಸಲಾಗಿದೆ. ಈ ಸಂಸ್ಥೆ ರಾಜ್ಯದ ಎಂಟು ವಿಶ್ವವಿದ್ಯಾಲಯಗಳಲ್ಲಿ ಸೇವೆ ನೀಡುತ್ತಿದೆ. ಟೆಂಡರ್ ಒಪ್ಪಂದದ ಪ್ರಕಾರ ಪ್ರತಿ ವಿದ್ಯಾರ್ಥಿ / ಪ್ರತಿ ಸೆಮೆಸ್ಟರ E-Governance ಗಾಗಿ ರೂ.170/– ಹಾಗೂ Result processing ಗಾಗಿ ರೂ.110/– ನೀಡಲಾಗುತ್ತಿದೆ ಎಂದು ತಿಳಿಸಿದರು.<br><br>ಸದಸ್ಯರಾದ ಡಾ: ಅರವಿಂದ ರವರು ಈ ಸಂಸ್ಥೆಯಿಂದ ಸೇವೆ ಪಡೆಯಲು ಸರ್ಕಾರದ ನಿರ್ದೇಶನದ ಕುರಿತು ಹಾಗೂ ಒಪ್ಪಂದ ಪತ್ರದ ಪ್ರಕಾರ, ಸ್ಥಳ, ಕಂಪ್ಯೂಟರ್, ಇಂಟರ್‌ನೆಟ್ ಇತ್ಯಾದಿಗಳನ್ನು ವಿಶ್ವವಿದ್ಯಾಲಯದಿಂದ ಒದಗಿಸುವ ಷರತ್ತು ಇರುವ ಬಗ್ಗೆ ಕೇಳಿದರು.<br><br>ಸದಸ್ಯರಾದ ಡಾ: ವಿ.ಆರ್. ದೇವರಾಜ ರವರು ಪ್ರತಿ ಪರೀಕ್ಷೆ ಆದಮೇಲೆ ಆ ದತ್ತಾಂಶಗಳ ಸುರಕ್ಷತೆ ಕುರಿತು ಮಾಹಿತಿ ಕೋರಿದರು. ಸದಸ್ಯಾರಾದ ಡಾ: ಆರ್. ಪಾರ್ವತಿ ಯವರು ಮಾತನಾಡಿ ದತ್ತಾಂಶಗಳು ಸರ್ವರ್‌ಗಳಿಂದ ನಿಯಂತ್ರಿಸಲಾಗುತ್ತದೆ ಇವುಗಳನ್ನು ರಾಜ್ಯದ ಡಾಟಾ ಸೆಂಟರ್‌ನಲ್ಲಿ ಶೇಖರಿಸಿ ಇಡಬಹುದು ಹಾಗೂ Block Chain Technology ಅಳವಡಿಸುವುದರಿಂದ ದತ್ತಾಂಶ ಸುರಕ್ಷಿತವಾಗಿರುತ್ತವೆ ಎಂದು ತಿಳಿಸಿದರು.<br><br>ಕುಲಸಚಿವರು(ಮೌಲ್ಯಮಾಪನ) ವಿಶ್ವವಿದ್ಯಾಲಯ ತಂತ್ರಜ್ಞರನ್ನು ನೇಮಕ ಮಾಡಿಕೊಂಡರೆ, ತಂತ್ರಜ್ಞಾನ ಸಂಬಂಧಿಸಿದ ಕೆಲಸಗಳನ್ನು ಉತ್ತಮವಾಗಿ ನಿರ್ವಹಿಸಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.<br><br>ತೀರ್ಮಾನ<br><br>**E-Governance ಮತ್ತು** Examination Processing System **ಗಳಿಗೆ ಸಂಬಂಧಿಸಿದ ಟೆಂಡರ್ ಪ್ರಕ್ರಿಯೆಯ ಎಲ್ಲಾ ವಿವರಗಳು, ನಿಬಂಧನೆಗಳು, ಒಪ್ಪಂದ ಪತ್ರ, ಮಾರ್ಗದರ್ಶನ ಇತ್ಯಾದಿಗಳನ್ನು ಮುಂದಿನ ಸಿಂಡಿಕೇಟ್ ಸಭೆಗೆ ಮಂಡಿಸ ಬೇಕೆಂದು ತೀರ್ಮಾನಿಸಲಾಯಿತು.** |
| ಸಾಮಾನ್ಯ ವಿಷಯಗಳ ಚರ್ಚೆ:4 | ಸದಸ್ಯರಾದ ಶ್ರೀ ಟಿ.ಹೆಚ್. ಶ್ರೀನಿವಾಸಯ್ಯ ನವರು UVCE ಕುರಿತು ಕೇಳಿದ ಮಾಹಿತಿಗೆ ಕುಲಪತಿಗಳು ಗೆಜೆಟ್ ಅಧಿಸೂಚನೆ ಪ್ರಕಾರ ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ಭೌಗೋಳಿಕ ವ್ಯಾಪ್ತಿ 13 ವಿಧಾನ ಸಭಾ ಕ್ಷೇತ್ರಗಳಿಗೆ ವಿಸ್ತರಿಸಿದೆ. ಈ ವ್ಯಾಪ್ತಿಯಲ್ಲಿ UVCE ಕೂಡ ಬರುತ್ತಿದೆ. ಹಾಗಾಗಿ UVCE ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯಕ್ಕೆ ಸೇರಬೇಕು. ಆದರೆ, ಸರ್ಕಾರದ |

| | |
|---|---|
| | ಮಟ್ಟದಲ್ಲಿ ಸಮಿತಿಗಳನ್ನು ರಚಿಸಿ UVCE ಆಡಳಿತ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ನೀಡಿರುತ್ತದೆ. ಅಂತಿಮವಾಗಿ ಕರ್ನಾಟಕ ಸರ್ಕಾರದ ನಿವೃತ್ತ ಪ್ರಧಾನ ಕಾರ್ಯದರ್ಶಿಗಳು ಹಾಗೂ KSHEC ಉಪಾಧ್ಯಕ್ಷರಾದ ಶ್ರೀ ಎಸ್.ವಿ. ರಂಗನಾಥ ಅವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿದ್ದಾರೆ. ಸಮಿತಿಯ ವರದಿ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಕಾನೂನಾತ್ಮಕವಾಗಿ UVCE ಈ ವಿಶ್ವವಿದ್ಯಾಲಯಕ್ಕೆ ಸೇರಬೇಕು. ಆದರೆ, ವರದಿಯಲ್ಲಿ UVCE ಯನ್ನು ಒಂದು ಸ್ವಾಯತ್ತ ಸಂಸ್ಥೆಯಾಗಿ ಮಾಡಲು ಶಿಫಾರಸ್ಸು ಮಾಡಿದ್ದಾರೆ. ಈ ಕುರಿತು ಮಾನ್ಯ ಸದಸ್ಯರು ಸರ್ಕಾರದ ಮಟ್ಟದಲ್ಲಿ ಪ್ರಯತ್ನಿಸಿ UVCE ಯನ್ನು ಈ ವಿಶ್ವವಿದ್ಯಾಲಯದಲ್ಲಿ ಉಳಿಸಿ ಕೊಳ್ಳಲು ಪ್ರಯತ್ನಿಸಬೇಕೆಂದು ತಿಳಿಸಿದರು. |
| ಸಾಮಾನ್ಯ ವಿಷಯಗಳ ಚರ್ಚೆ–5 | ಸದಸ್ಯರಾದ ಶ್ರೀಮತಿ ಜ್ಯೋತಿ ವಿಜಯ್ ಅವರು ವಿಶ್ವವಿದ್ಯಾಲಯಕ್ಕೆ ಕಳಿಸುವ ಇ–ಮೇಲ್‌ಗಳಿಗೆ ಸಂಬಂಧಿಸಿದವರಿಂದ ಯಾವುದೇ ಉತ್ತರ ಬರುತ್ತಿಲ್ಲ. ಪ್ರಸ್ತುತ ಸನ್ನಿವೇಶದಲ್ಲಿ ಇ–ಮೇಲ್‌ಗಳು ಅತ್ಯಂತ ಕ್ಷಿಪ್ರ ಹಾಗೂ ಅನುಕೂಲಕರವಾದ ಸಂಪರ್ಕ ಸಾಧನವಾಗಿದ್ದು ಸಾರ್ವಜನಿಕರು, ಪ್ರಾಧಿಕಾರಗಳ ಸದಸ್ಯರು ಹಾಗೂ ವಿದ್ಯಾರ್ಥಿಗಳು ಕಳಿಸುವ ಇ–ಮೇಲ್‌ಗಳಿಗೆ ಕೂಡಲೇ ಸ್ಪಂದಿಸಿ ಉತ್ತರ ನೀಡುವ ವ್ಯವಸ್ಥೆ ಜಾರಿಗೆ ತರಬೇಕೆಂದು ತಿಳಿಸಿದರು.<br><br>ಈ ಕುರಿತು ವಿಶ್ವವಿದ್ಯಾಲಯ ಒಂದು ಪೂರ್ಣಪ್ರಮಾಣದ Web Portal ಸಿದ್ಧಪಡಿಸಲು ಯೋಚಿಸಲಾಗಿದೆ. ಆಗ ತಾಂತ್ರಿಕ ಸಿಬ್ಬಂದಿಗಳನ್ನು ನಿಯೋಜಿಸಿ ಕೂಡಲೇ ಮಾಹಿತಿ ನೀಡುವ ವ್ಯವಸ್ಥೆ ಮಾಡಲಾಗುವುದು. ಸದ್ಯಕ್ಕೆ ಕುಲಪತಿಗಳ/ಕುಲಸಚಿವರ/ಕುಲಸಚಿವ(ಮೌಲ್ಯಮಾಪನ)/ ವಿತ್ತಾಧಿಕಾರಿಗಳಿಗೆ ಕಳುಹಿಸುವ ಈ ಇ–ಮೇಲ್‌ಗಳಿಗೆ ಉತ್ತರಿಸಲು ಕ್ರಮ ಕೈಕೊಳ್ಳುವಂತೆ ಸೂಚಿಸಲಾಗುವುದು ಎಂದು ಕುಲಪತಿಗಳು ತಿಳಿಸಿದರು. |
| ಸಾಮಾನ್ಯ ಚರ್ಚೆ 6 | ಕುಲಪತಿಗಳು ದಿನಾಂಕ 17–22 ಜನವರಿ 2020 ರಂದು ಜರುಗಲಿರುವ 43 ನೇ ಇಂಡಿಯನ್ ಸೋಶಿಯಲ್ ಸೈನ್ಸ್ ಕಾಂಗ್ರೆಸ್ –2019 ಕುರಿತು ವಿವರಣೆ ನೀಡಿ ಈ ಕಾರ್ಯಕ್ರಮಕ್ಕೆ ಗೌರವಾನ್ವಿತ ರಾಷ್ಟ್ರಪತಿಗಳು ಬರುವ ಸಾಧ್ಯತೆ ಇದೆ. ಪೋಲೀಸ್ ಇಲಾಖೆ, ಜ್ಞಾನಜ್ಯೋತಿ ಸಭಾಂಗಣಕ್ಕೆ ಭೇಟಿ ನೀಡಿ ಸುರಕ್ಷತೆ ದೃಷ್ಟಿಯಿಂದ ಕೈಕೊಳ್ಳಬೇಕಾದ ಕ್ರಮಗಳ ಪಟ್ಟಿ ನೀಡಿರುತ್ತಾರೆ. ಪ್ರಮುಖವಾಗಿ CCTV, Metal Detector, Scanner, Luggage Scanner, Fire Extinguisher ಶೌಚಾಲಯಗಳ ರಿಪೇರಿ, ಏ.ಸಿ ಯಂತ್ರಗಳ ವೈರಿಂಗ್ ಕೆಲಸ ಇತ್ಯಾದಿಗಳ ಕುರಿತು ಕೂಡಲೇ ಕ್ರಮ ಕೈಕೊಂಡು ವರದಿ ಸಲ್ಲಿಸಲು ಸೂಚಿಸಿದ್ದಾರೆ. ಈ ಕಾರ್ಯಕ್ರಮದ ಖರ್ಚು ವೆಚ್ಚಕ್ಕಾಗಿ ಪ್ರತ್ಯೇಕವಾದ ಬ್ಯಾಂಕ್ ಖಾತೆ ತೆರೆಯಲಾಗಿದ್ದು, ವಿಶ್ವವಿದ್ಯಾಲಯದಿಂದ ರೂ.10 ಲಕ್ಷಗಳ ಮೂಲಧನ ನೀಡಲಾಗಿದೆ ಎಂದು ತಿಳಿಸಿದರು. ಈ ಕಾರ್ಯಕ್ರಮಕ್ಕಾಗಿ 1.00 ರಿಂದ 1.5 ಕೋಟಿ ವೆಚ್ಚ ಅಂದಾಜಿಸಲಾಗಿದ್ದು, ಮಹಾವಿದ್ಯಾಲಯ ಹಾಗೂ ಸಂಘ |

| | |
|---|---|
| | ಸಂಸ್ಥೆಗಳಿಂದ ವಂತಿಗೆ ಹಣ ನಿರೀಕ್ಷಿಸಲಾಗಿದ್ದು, ಈ ಹಣ ಸಾಲದೇ ಹೋದರೆ ವಿಶ್ವವಿದ್ಯಾಲಯದಿಂದ ಹೆಚ್ಚುವರಿ ಹಣ ಬಿಡುಗಡೆ ಮಾಡಲು ಅನುಮತಿ ನೀಡಲು ಕೋರಿದರು.<br><br>ಸದಸ್ಯರಾದ ಶ್ರೀಮತಿ. ಜ್ಯೋತಿ ವಿಜಯ್, ಶ್ರೀ ಟಿ.ಹೆಚ್. ಶ್ರೀನಿವಾಸಯ್ಯ, ಚರ್ಚೆಯಲ್ಲಿ ಭಾಗವಹಿಸಿ, ಸಂಯೋಜಿತ ಕಾಲೇಜುಗಳಿಂದ ವಂತಿಗೆ ಪಡೆಯುವುದು ಸರಿಯಲ್ಲವೆಂದು ತಿಳಿಸಿದರು. ಮನವಿ ಪತ್ರದ ಮೇಲೆ ಕುಲಪತಿಗಳ ಭಾವ ಚಿತ್ರ ಮುದ್ರಿಸಿರುವುದಕ್ಕೆ ಆಕ್ಷೇಪ ವ್ಯಕ್ತಪಡಿಸಿದರು ಹಾಗೂ ಹೆಚ್ಚಿನ ಹಣ ಬಿಡುಗಡೆಗೆ ಸದಸ್ಯರಾದ ಡಾ. ಅರವಿಂದ ರವರು ವಿರೋಧ ಸೂಚಿಸಿ ಈ ವಿಷಯ ಹಿಂದೆ ಸಿಂಡಿಕೇಟ್ ಸಭೆಯಲ್ಲಿ ಚರ್ಚಿಸಲಾಗಿದೆ, ಈ ಕಾರ್ಯಕ್ರಮವನ್ನು ಸರ್ಕಾರ, ಯು.ಜಿ.ಸಿ, ಮಹಾವಿದ್ಯಾಲಯ, ಸಂಘ ಸಂಸ್ಥೆಗಳ ಧನಸಹಾಯದಿಂದ ನಿರ್ವಹಿಸಲಾಗುವುದು ಎಂದು ತಿಳಿಸಲಾಗಿದೆ. ಆಯವ್ಯಯದಲ್ಲಿ ಮಾಡಿದ ಬಡ್ಜೆಟ್ ಅವಕಾಶ ವಿಶ್ವವಿದ್ಯಾಲಯದ ಇತರ ವಿಭಾಗಗಳು ಆಯೋಜಿಸುವ ಸೆಮಿನಾರ್ / ಸಮ್ಮೇಳನಗಳಿಗೆ ಒದಗಿಸಲಾಗಿದೆ. ಹೀಗಾಗಿ ವಿಶ್ವವಿದ್ಯಾಲಯದಿಂದ ಹೆಚ್ಚಿನ ಹಣಕಾಸು ಸಹಾಯ ನೀಡಲು ಒಪ್ಪಲಾಗುವುದಿಲ್ಲವೆಂದು ತಿಳಿಸಿದರು.<br><br>ಸದಸ್ಯರಾದ ಡಾ. ಎಂ. ಪಾಂಡುರಂಗಪ್ಪ ಹಾಗೂ ಡಾ. ಬಿ.ಎ. ಅನುರಾಧ ಅವರು ಚರ್ಚೆಯಲ್ಲಿ ಭಾಗವಹಿಸಿ, ಈ ಕುರಿತು ISSC ಕಾರ್ಯಕ್ರಮದ ದಿನಗಳನ್ನು ಕಡಿಮೆ ಮಾಡುವುದನ್ನು ಪರಿಗಣಿಸಿದಲ್ಲಿ ವೆಚ್ಚ ತಗ್ಗಿಸಬಹುದೆಂದು ಹಾಗೂ ವಿವಿಧ ಕಾರ್ಪೋರೇಟ್ ಸಂಸ್ಥೆಗಳಿಂದ ಧನಸಹಾಯ ಕೋರಬೇಕೆಂದು ತಿಳಿಸಿದರು.<br><br>ಸದಸ್ಯರಾದ ಡಾ. ಆರ್. ಪಾರ್ವತಿಯವರು ಮಾತನಾಡಿ ಕುಲಪತಿಗಳು ಈಗಾಗಲೇ ಕಾರ್ಯಕ್ರಮ ಆಯೋಜಿಸಲು ಒಪ್ಪಿಗೆ ನೀಡಿರುವುದರಿಂದ ಈ ಹಂತದಲ್ಲಿ ಕಾರ್ಯಕ್ರಮದಲ್ಲಿ ಏರುಪೇರಾದರೆ, ವಿಶ್ವವಿದ್ಯಾಲಯದ ಗೌರವಕ್ಕೆ ಚ್ಯುತಿ ಬರುತ್ತದೆ ಎಂದು ತಿಳಿಸಿದರು. ಕಾರ್ಯಕ್ರಮಕ್ಕೆ ರಾಷ್ಟ್ರಪತಿಗಳು ಬರುವ ಸಾಧ್ಯತೆ ಇರುವುದರಿಂದ ಈ ಕುರಿತು ಯೋಚಿಸಿ ತೀರ್ಮಾನಿಸಬೇಕು ಎಂದು ಹೇಳಿದರು.<br><br>ಸದಸ್ಯರಾದ ಶ್ರೀ ಥಾಮಸ್ ನೀಲಿಯಾರ ಅವರು ಕಾರ್ಪೋರೇಟ್ ಸಂಸ್ಥೆಗಳಿಂದ ಧನ ಸಹಾಯ ಪಡೆಯಲು ಪ್ರಯತ್ನಿಸಬೇಕೆಂದು ತಿಳಿಸಿದರು ತಮಗೆ ಪರಿಚಯವಿರುವ ಸಂಸ್ಥೆಗಳಿಂದ ಧನಸಹಾಯಕ್ಕಾಗಿ ಪ್ರಯತ್ನಿಸುವುದಾಗಿ ತಿಳಿಸಿದರು. |

| | |
|---|---|
| | ಶ್ರೀ. ಟಿ.ಹೆಚ್. ಶ್ರೀನಿವಾಸಯ್ಯನವರು ತಮ್ಮ ಒಂದು ವರ್ಷದ Sitting fees ಈ ಕಾರ್ಯಕ್ರಮಕ್ಕೆ ವಂತಿಗೆಯಗಿ ನೀಡುವುದಾಗಿ ತಿಳಿಸಿದರು. ಆದರೆ ವಿಶ್ವವಿದ್ಯಾಲಯದಿಂದ ಹೆಚ್ಚಿನ ಹಣಕಾಸಿನ ಸಹಾಯ ನೀಡಲು ಒಪ್ಪಲಾಗುವುದಿಲ್ಲವೆಂದು ತಿಳಿಸಿದರು.<br><br>ಅಂತ್ಯದಲ್ಲಿ ಕುಲಪತಿಗಳು ವಿವರಣೆ ನೀಡಿ, ಇದು ಒಂದು ಪ್ರಮುಖ ಕಾರ್ಯಕ್ರಮವಾಗಿದ್ದು, ಇದರಿಂದ ವಿಶ್ವವಿದ್ಯಾಲಯದ ಹಾಗೂ ಮಹಾವಿದ್ಯಾಲಯಗಳ ಬೋಧಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ಸಹಾಯವಾಗಲಿದೆ. ಸರ್ಕಾರ, ಯು.ಜಿ.ಸಿ ಹಾಗೂ ಇನ್ನಿತರ ಸಂಘ ಸಂಸ್ಥೆಗಳಿಗೆ ಧನ ಸಹಾಯ ನೀಡಲು ವಿನಂತಿಸಿದ್ದೇವೆ ಅದು ಸಾಲದೇ ಹೋದರೆ ಪುನಃ ಸಿಂಡಿಕೇಟ್ ಸಭೆಯ ಗಮನಕ್ಕೆ ತರಲಾಗುವುದು ಎಂದು ತಿಳಿಸಿದರು. |

ಸಭೆಯ ಅಂತ್ಯದಲ್ಲಿ ವಿಶ್ವವಿದ್ಯಾಲಯದ ಕುಲಸಚಿವರು (ಮೌಲ್ಯಮಾಪನ) ರಾಗಿ ಸೇವೆ ಸಲ್ಲಿಸುತ್ತಿರುವ ಡಾ. ಎನ್. ಚಂದ್ರಪ್ಪನವರು ಈ ತಿಂಗಳ ಅಂತ್ಯಕ್ಕೆ ವಯೋನಿವೃತ್ತಿ ಹೊಂದುತ್ತಿರುವುದರಿಂದ ಅವರು ತಮ್ಮ ಮಾತೃ ಸಂಸ್ಥೆಯಾದ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರಕ್ಕೆ ವರದಿ ಮಾಡಿಕೊಳ್ಳಲು ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ಕರ್ತವ್ಯದಿಂದ ಬಿಡುಗಡೆ ಮಾಡಲಾಗುತ್ತಿರುವದನ್ನು ಕುಲಪತಿಗಳು ಸಭೆಗೆ ತಿಳಿಸಿದರು. ಸಿಂಡಿಕೇಟ್ ಪರವಾಗಿ ಡಾ. ಎನ್. ಚಂದ್ರಪ್ಪನವರಿಗೆ ಆತ್ಮೀಯವಾದ ಬೀಳ್ಕೊಡುಗೆ ನೀಡಲಾಯಿತು.

ಕುಲಸಚಿವರ ವಂದನಾರ್ಪಣೆಯೊಂದಿಗೆ ಸಭೆ ಮುಕ್ತಾಯವಾಯಿತು.

ಸಹಿ/–
ಕುಲಸಚಿವರು

ಸಹಿ/–
ಕುಲಪತಿಗಳು

02/01/2020
ಕುಲಸಚಿವರು
ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ